# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಚನ್ನರಾಜ್ ಬಸವರಾಜ್ ಹಟ್ಟಿಹೊಳಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1032 |
| ಉತ್ತರಿಸುವ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 27-12-2022. |

| ಕ್ರ.ಸಂ. | ಪ್ರಶ್ನೆ | ಉತ್ತರ | Answer |
|---|---|---|---|
| (ಅ) | ರಾಜ್ಯಾದ್ಯಾಂತ ಇರುವ ನೇಕಾರರುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | 2019-20 ನೇ ಸಾಲಿನ 4ನೇ ರಾಷ್ಟ್ರೀಯ ಗಣತಿ ಪ್ರಕಾರ ರಾಜ್ಯದಲ್ಲಿ 54,250 ಕೈಮಗ್ಗ ನೇಕಾರರು ಇರುತ್ತಾರೆ.<br>ರಾಜ್ಯದಲ್ಲಿ ವಿದ್ಯುತ್ ಮಗ್ಗ ನೇಕಾರರ ಗಣತಿ ಕಾರ್ಯ ಪ್ರಗತಿಯಲ್ಲಿದ್ದು, ದಿನಾಂಕ: 16.12.2022 ರ ಅಂತ್ಯಕ್ಕೆ 97,133 ವಿದ್ಯುತ್‌ಮಗ್ಗ ನೇಕಾರರು ಇರುತ್ತಾರೆ.<br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ. | As per the 4th National Census conducting during 2019-20, there are totally 54,250 Handlooms Weavers.<br>Conducted powerloom census during the year 2022-23 Progress as on 16.12.2022 97,133 Powerloom Weavers in the State.<br>District wise information is enclosed at Annexure-1. |
| (ಆ) | ರಾಜ್ಯದಲ್ಲಿರುವ ನೇಕಾರರು ಆರ್ಥಿಕವಾಗಿ ಹಿಂದುಳಿದವರಾಗಿದ್ದು, ಇವರ ಕುಲ ಕಸುಬಿಗೆ ಉತ್ತೇಜನ ನೀಡಲು ಸರ್ಕಾರ ಹಾಗೂ ನಿಗಮಗಳಿಂದ ನೀಡುವ ಸೌಲಭ್ಯಗಳು ಯಾವುವು; | ರಾಜ್ಯದಲ್ಲಿರುವ ನೇಕಾರರು ಆರ್ಥಿಕವಾಗಿ ಹಿಂದುಳಿದವರಾಗಿದ್ದು ಇವರ ಕುಲ ಕಸುಬು ಉತ್ತೇಜನ ನೀಡಲು ಸರ್ಕಾರ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ<br>**<u>ಕೈಮಗ್ಗ ವಲಯದ ಯೋಜನೆಗಳು:-</u>**<br>1. ನೇಕಾರ ಸಮ್ಮಾನ್ ಯೋಜನೆಯಡಿ ಪ್ರತಿ ವರ್ಷ ರೂ.5000/-ಗಳನ್ನು ನೇರವಾಗಿ DBT ಮುಖಾಂತರ ಕೈಮಗ್ಗ ನೇಕಾರರಿಗೆ ಪಾವತಿಸಲಾಗಿದೆ.<br>2. ನೇಕಾರರ ಮಕ್ಕಳಿಗೆ ಹೆಚ್ಚಿನ ಹಾಗೂ ಶಿಕ್ಷಣ ಪ್ರೋತ್ಸಾಹಿಸಲು ವಿದ್ಯಾರ್ಥಿ ವೇತನ.<br>3. ಕೈಮಗ್ಗ ವಿಕಾಸ ಯೋಜನೆ- ಕೈಮಗ್ಗ ಹಾಗೂ ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕದ ವೆಚ್ಚ ಶೇ.50 ರಷ್ಟು ಸಹಾಯಧನ .<br>4. ಕೈಮಗ್ಗಗಳಿಗೆ ಮೋಟರೈಸ್‌ಡ್ ಜಕಾರ್ಡ್ ಸೌಲಭ್ಯ.<br>5. ಕಚ್ಚಾ ಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ.<br>6. ಮೃತ ನೇಕಾರರ(ಕೈಮಗ್ಗ) ಅಂತ್ಯ ಸಂಸ್ಕಾರ ವೆಚ್ಚ ಮರುಪಾವತಿ.<br>7. ಸಹಕಾರ ಬ್ಯಾಂಕುಗಳು ನೀಡಿದ ಶೇ.1 ಮತ್ತು ಶೇ.3 ಬಡ್ಡಿ ಸಹಾಯಧನ.<br>8. ನೇಕಾರರಿಗೆ ಶೇ.8 ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ.<br>9. ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ವರ್ಷ ಪೂರ್ತಿ ಶೇ.20 ರಿಬೇಟ್ ಯೋಜನೆ. | As the weavers in the State are backward, the State Government has implemented following programs in order to encourage their activities.<br>**<u>HANDLOOM SCHEMES</u>**<br>1. Nekar Samman Scheme to Handloom Weavers.<br>2. Scholarship to encourage and further education of Weavers' children.<br>3. Kymagga Vikasa Scheme.<br>4. Providing equipment kits of Pneumatic / Motorized Jacquard to Handlooms<br>5. Rs. 15/- subsidy per kg on the purchase of raw material.<br>6. Reimbursement of Funeral Charges to the deceased Handloom Weavers<br>7. Loan facility @ 8% to weavers.<br>8. Interest subsidy on 1% and 3% loan.<br>9. 20% rebate scheme on the sale of handloom products.<br>10. Thrift fund scheme.<br>11. Subsidy under Rehabilitation and Reinforcement of Wool Sector Scheme. |

| | | | |
|---|---|---|---|
| | | 10. ಏಳಿಗೆ ನಿಧಿ ಯೋಜನೆಯಡಿ ಸರ್ಕಾರದ ಸಮಚಂದಾ ಹಾಗೂ ಏಳಿಗೆ ನಿಧಿ ಮೇಲಿನ ಬಡ್ಡಿ.<br>11. ಉಣ್ಣೆವಲಯ ಪುನಃಶ್ಚೇತನ ಮತ್ತು ಬಲವರ್ಧನೆ ಯೋಜನೆಯಡಿ ಸಹಾಯಧನ. | – |
| | | <u>**ಜವಳಿ ವಲಯದ ಯೋಜನೆಗಳು:-**</u> | <u>**POWERLOOM SCHEMES :**</u> |
| | | 1. <u>**ನೇಕಾರ ಪ್ಯಾಕೇಜ್ ಯೋಜನೆ:**</u><br>• 01 ರಿಂದ 20 ಹೆಚ್.ಪಿ ವರೆಗಿನ ವಿದ್ಯುತ್ ಮಗ್ಗ / ಮಗ್ಗ ಪೂರ್ವ ಘಟಕ ಗಳಿಗೆ ವಿದ್ಯುತ್ ಸಹಾಯಧನ.<br>• 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ.<br>• ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ. | 1. **Weavers' Special Package.**<br>• Power subsidy for connections from 01 to 20 HP<br>• Subsidy on purchase of 02 Powerlooms<br>• Subsidy on purchase of Electronic Jacquard |
| | | 2. <u>**ಪರಿಶಿಷ್ಟ ಜಾತಿ ಉಪ ಯೋಜನೆ:**</u><br>• ಕೈಮಗ್ಗ ಮತ್ತು ಸಲಕರಣೆಗಳ ಖರೀದಿಗೆ ಸಹಾಯಧನ.<br>• 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ.<br>• ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ.<br>• ಮಿನಿ ಪವರ್‌ಲೂಮ್ ಪಾರ್ಕ್ ಸ್ಥಾಪನೆಗೆ ಸಹಾಯಧನ.<br>• ಮಗ್ಗ ಪೂರ್ವ ಸೌಲಭ್ಯ. | 2. <u>**SCSP/TSP SCHEMES.**</u><br>• Subsidy on purchase of Handloom & other equipment.<br>• Subsidy on purchase of 02 Powerlooms.<br>• Subsidy on purchase of Electronic Jacquard.<br>• Mini Powerloom Park.<br>• Pre-loom Facility. |
| | | 3. <u>**ಗಿರಿಜನ ಉಪ ಯೋಜನೆ:**</u><br>• ಕೈಮಗ್ಗ ಮತ್ತು ಸಲಕರಣೆಗಳ ಖರೀದಿಗೆ ಸಹಾಯಧನ.<br>• 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ.<br>• ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ. | 3. <u>**TRIBAL SUB-PLAN**</u>:<br>• Subsidy on purchase of Handloom & other equipment.<br>• Subsidy on purchase of 02 Powerlooms.<br>• Subsidy on purchase of electronic Jacquard. |
| | | <u>**ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ.,**</u><br>ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನಿಗಮದ ನೋಂದಾಯಿತ ನೇಕಾರರಿಗೆ ಕಚ್ಚಾ ನೂಲನ್ನು ನಿರಂತರವಾಗಿ ಪೂರೈಕೆ ಮಾಡಿ, ನೇಕಾರರು ಉತ್ಪಾದಿಸಿದ ಬಟ್ಟೆಗಳಿಗೆ ಸಮಂಜಸದರದಲ್ಲಿ ಪರಿವರ್ತನಾ ಶುಲ್ಕವನ್ನು ಪಾವತಿಸಿ ನೇಕಾರರು ನೇಯ್ದಂತಹ ಬಟ್ಟೆಗಳನ್ನು ಹಿಂದಕ್ಕೆ ಪಡೆದು ಅವುಗಳ ಮಾರಾಟದ ಜವಾಬ್ದಾರಿಯನ್ನು ನಿಗಮವೇ ವಹಿಸುತ್ತಿದೆ. | <u>**KARNATAKA HANDLOOM DEVELOPMENT CORPORATION**</u>:<br>Karnataka Handloom Development Corporation has continuously supplying raw yarn to its registered weaves and taking back the woven cloths by paying suitable conversion fees and taken the responsibility of it sale. |
| | | 1. ನಿಗಮವು ರಾಜ್ಯಾದ್ಯಂತ 23 ವಿವಿಧ ಸ್ಥಳಗಳಲ್ಲಿ ನೇಕಾರರ ಕಾಲೋನಿಗಳನ್ನು ನಿರ್ಮಿಸಿ ಅಲ್ಲಿ ವಸತಿ ಹಾಗೂ ನಿವೇಶನ ರಹಿತ ನೇಕಾರರಿಗೆ 3914 ವಸತಿ ಹಾಗೂ ಕಾರ್ಯಾಗಾರಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದೆ. | 1. Corporation has developed residential weavers' colonies in 23 various places of the State and allotted 3914 residential and construction workshops to landless weavers. |

<table>
<tr>
<td></td>
<td></td>
<td>2. ನೇಕಾರರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ಬೀದಿ ದೀಪ ಇತ್ಯಾದಿಗಳನ್ನು ಒದಗಿಸಲಾಗಿದೆ.<br>3. ನೇಕಾರನು/ಳು ಮೃತಪಟ್ಟಲ್ಲಿ ಅವನ/ಅವಳ ಅಂತ್ಯಕ್ರಿಯೆಗೆ ಅವರ ಕುಟುಂಬದ ವಾರಸುದಾರರಿಗೆ ರೂ.10,000/- ಗಳನ್ನು ಒದಗಿಸಲಾಗುತ್ತದೆ.<br><br>ನೇಕಾರರಿಗೆ ನಿರಂತರವಾಗಿ ಕಚ್ಚಾ ಮಾಲು ಪೂರೈಕೆ ಹಾಗೂ ಮಾರಾಟ ಬೆಂಬಲ ಒದಗಿಸುವ ಮೂಲಕ ನಿಗಮವು ನೇಕಾರರಿಗೆ ಜೀವನೋಪಾಯ ಒದಗಿಸುವುದರ ಜೊತೆಗೆ ರಾಜ್ಯ ಸರ್ಕಾರದ ವಿವಿಧ ನೇಕಾರರ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ನೇಕಾರರ ಆರ್ಥಿಕ ಹಾಗೂ ಸಾಮಾಜಿಕ ಏಳಿಗೆಗಾಗಿ ನಿಗಮವು ಶ್ರಮಿಸುತ್ತಿದೆ.<br><br><u>ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿ.,</u><br>ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದಲ್ಲಿ ನೊಂದಾಯಿತ ವಿದ್ಯುತ್‌ಮಗ್ಗ ಘಟಕಗಳಲ್ಲಿ ಉತ್ಪಾದಿಸುವ ಶಿಕ್ಷಣ ಇಲಾಖೆಯಿಂದ ನೀಡಲಾಗುವ ವಿದ್ಯಾ ವಿಕಾಸ ಯೋಜನೆಯಡಿಯ ಸಮವಸ್ತ್ರ ಬಟ್ಟೆ ಸರಬರಾಜು ಆದೇಶವನ್ನು ನಿಗಮದಲ್ಲಿ ನೊಂದಾಯಿತ ಘಟಕಗಳಿಗೆ ನೀಡಿ ಉತ್ಪಾದನೆ ಪಡೆದು ಶಿಕ್ಷಣ ಇಲಾಖೆಗೆ ನೀಡಲಾಗುತ್ತಿದೆ.</td>
<td>2. All basic infrastructures like drinking water, road and street light has been provided in the said Weavers' Colony.<br>3. Rs.10,000/- is provided to the family members of the deceased weavers' funeral and last rights.<br><br>Corporation is continuously working for financial and social upliftment of weavers by implementing various weavers' welfare programs along with providing livelihood to the weavers by continuously providing raw materials to them.<br><br><u>KARNATAKA STATE TEXTILE INFRASTRUCTURE DEVELOPMENT CORPORATION LTD.,</u><br>Karnataka State Infrastructure Development Corporation provides work order for supply of school uniforms from Education Department to this registered Powerloom Units and supply school uniforms to the Education Department.</td>
</tr>
<tr>
<td>(ಇ)</td>
<td>ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ನೀಡುವ ಸಮವಸ್ತ್ರಗಳನ್ನು ಸರ್ಕಾರವು ಬೇರೆ ರಾಜ್ಯದಿಂದ ಖರೀದಿ ಮಾಡುವ ಬದಲು ರಾಜ್ಯದ ನೇಕಾರರಿಂದ ಖರೀದಿ ಮಾಡದೆ ಇರಲು ಕಾರಣಗಳೇನು; ಇದರಿಂದ ರಾಜ್ಯದ ನೇಕಾರರಿಗೆ ಆರ್ಥಿಕವಾಗಿ ಹೊಡೆತ ಬೀಳುವಂತಾಗುವುದಿಲ್ಲವೇ; ಈ ಬಗ್ಗೆ ಸರ್ಕಾರದ ನಿಲವೇನು;</td>
<td><u>ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ :-</u><br><br>ಕರ್ನಾಟಕ ರಾಜ್ಯದ ಶಿಕ್ಷಣ ಇಲಾಖೆಯು ವಿದ್ಯಾ ವಿಕಾಸ ಯೋಜನೆಯಡಿ ಶಾಲಾ ಮಕ್ಕಳ ಸಮವಸ್ತ್ರಕ್ಕೆ ಅವಶ್ಯವಿರುವ ಬಟ್ಟೆಯನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದಲೇ ಖರೀದಿಸುತ್ತಿದ್ದು, ಇದರಿಂದ ನಿಗಮದ ನೇಕಾರರಿಗೆ ನಿರಂತರ ಉದ್ಯೋಗ ನೀಡಲು ಸಹಕಾರಿಯಾಗಿದೆ.<br><br><u>ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿ.,</u><br><br>ಈ ಸಂಸ್ಥೆಗೆ ಶಿಕ್ಷಣ ಇಲಾಖೆಯಿಂದ ಈ ಕೆಳಗಿನಂತೆ ಸಮವಸ್ತ್ರ ಪೂರೈಕೆಗೆ ಆದೇಶ ನೀಡಿರುತ್ತಾರೆ.
<table>
<tr><th>ವರ್ಷ</th><th>ಆದೇಶ</th><th>ಘಟಕ/ಸಂಘ</th></tr>
<tr><td>2021-22</td><td>10.21 ಲಕ್ಷ ಮೀಟರ್</td><td>51 ವಿದ್ಯುತ್ ಮಗ್ಗ ಘಟಕ / ಸಂಘಗಳಿಗೆ ಆದೇಶ ನೀಡಿದ್ದು ಪೂರೈಸಲಾಗಿದೆ.</td></tr>
<tr><td>2022-23</td><td>10.47 ಲಕ್ಷ ಮೀಟರ್</td><td>118 ವಿದ್ಯುತ್ ಮಗ್ಗ ಘಟಕ / ಸಂಘಗಳಿಗೆ ಆದೇಶ ನೀಡಿದ್ದು ಪೂರೈಸಲಾಗಿದೆ.</td></tr>
<tr><td>2023-24</td><td colspan="2">ಮುಂದಿನ ಸಾಲಿನ ಬೇಡಿಕೆ 10.09 ಲಕ್ಷ ಮೀಟರ್ ಪೂರೈಕೆಗೆ ಆದೇಶ ನೀಡಿದ್ದು, ನಿಗಮದ ಘಟಕ / ಸಂಘಗಳ ಮೂಲಕ ಪೂರೈಸಲು ಕ್ರಮವಹಿಸಲಾಗುತ್ತಿದೆ.</td></tr>
</table></td>
<td><u>KARNATAKA HANDLOOM DEVELOPMENT CORPORATION</u>:<br>Education Department of Government of Karnataka has continuously purchasing the required school uniforms from Karnataka Handloom Development Corporation and due the same weavers of the Corporation are continuously getting work.<br><br><u>KARNATAKA STATE TEXTILE INFRASTRUCTURE DEVELOPMENT CORPORATION LTD.</u><br>The education department has ordered the supply of uniforms to this institution as follows.
<table>
<tr><th>Year</th><th>Order</th><th>Unit/Society</th></tr>
<tr><td>2021-22</td><td>10.21 Lakh Mtr.</td><td>Orders were issued and supplied from 51 Powerloom Units/ Societies</td></tr>
<tr><td>2022-23</td><td>10.47 Lakh Mtr.</td><td>Orders were issued and supplied from 118 Powerloom Units/ Societies</td></tr>
<tr><td>2023-24</td><td colspan="2">Order has been issued for supply of 10.09 Lakh Mtrs. Actions have been taken for supply from Units/Societies of the Corporation.</td></tr>
</table></td>
</tr>
</table>

| | | | |
|---|---|---|---|
| (ಈ) | ಸರ್ಕಾರವು ಕೋವಿಡ್ ಸಮಯದಲ್ಲಿ ನೇಕಾರರಿಗೆ ಎಷ್ಟು ಸಹಾಯಧನ ನೀಡಿದೆ; (ಜಿಲ್ಲಾವಾರು ನೇಕಾರರುಗಳಿಗೆ ನೀಡುವ ಸಹಾಯಧನದ ಪಟ್ಟಿ ನೀಡುವುದು) | ಕೈಮಗ್ಗ ನೇಕಾರಿಕೆ ಹಾಗೂ ಇತರ ಕೈಮಗ್ಗ ಚಟುವಟಿಕೆಗಳನ್ನು ನಡೆಸುವ ಕೈಮಗ್ಗ ನೇಕಾರರಿಗೆ ನೇಕಾರ್ ಸಮ್ಮಾನ್ ಯೊಜನೆಯಡಿ ಪ್ರತಿ ಕೈಮಗ್ಗ ನೇಕಾರರಿಗೆ ರೂ.2,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ (ಡಿ.ಬಿ.ಟಿ) ಮೂಲಕ ನೀಡಲಾಗಿದೆ.<br><br>ವಿದ್ಯುತ್ ಚಾಲಿತ ಘಟಕ(ಮಗ್ಗ)ದಲ್ಲಿ ಕೆಲಸ ಮಾಡುತ್ತಿರುವ ಕೂಲಿ ಕಾರ್ಮಿಕರಿಗೆ ಒಂದು ಬಾರಿಗೆ ಅನ್ವಯಿಸುವಂತೆ ರೂ.2,000/- ಹಾಗೂ ರೂ.3,000/-ಗಳನ್ನು ಪರಿಹಾರ ಧನವನ್ನು ನೇರ ನಗದು ವರ್ಗಾವಣೆ (ಡಿ.ಬಿ.ಟಿ) ಮೂಲಕ ನೀಡಲಾಗಿದೆ.<br><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಿದೆ. | Rs.2,000/- annually was transferred through Direct Bank Transfer (D.B.T) under ...kar Samman Scheme for the handloom weavers who were involved in the activities of Handloom Weaving and other Handloom activities.<br><br>Labourers who were involved in Powerloom Units were provided Rs.2,000/- & Rs.3,000/- annually under Direct Bank Transfer (D.B.T) .<br><br>Districtwise information is enclosed in Annexure-2. |
| (ಉ) | ಸಹಾಯಧನ ನೀಡುವ ಸಮಯದಲ್ಲಿ ಸರ್ಕಾರವು ನೇಕಾರರಿಂದ ಪಡೆದ ದಾಖಲೆಗಳು ಮಾಹಿತಿ ನೀಡುವುದರೊಂದಿಗೆ ಸಹಾಯಧನ ನೀಡಲು ಇರುವ ಮಾನದಂಡಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು) | ನೇಕಾರರ ಸಮ್ಮಾನ್ ಯೋಜನೆಯಡಿ ಪ್ರತಿ ಕೈಮಗ್ಗ ನೇಕಾರರಿಗೆ ರೂ.2,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ (ಡಿ.ಬಿ.ಟಿ) ಮೂಲಕ ನೀಡಲು ಸರ್ಕಾರದ ಆದೇಶ ಸಂಖ್ಯೆ: CI 47 JAKY 2020, ದಿನಾಂಕ:16.05.2020 ರಲ್ಲಿ ಮಾನದಂಡಗಳ ಆದೇಶವನ್ನು ಹೊರಡಿಸಲಾಗಿರುತ್ತದೆ ಆದೇಶವನ್ನು ಅನುಬಂಧ-3 ರಲ್ಲಿ ಒದಗಿಸಿದೆ.<br><br>2022-23 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-268 ರನ್ವಯ ನೋಂದಾಯಿತ ಕೈಮಗ್ಗ ನೇಕಾರರಿಗೆ "ನೇಕಾರರ ಸಮ್ಮಾನ್" ಯೋಜನೆಯಡಿಯಲ್ಲಿ ಆರ್ಥಿಕ ನೆರವು ರೂ.2,000/- ಗಳಿಂದ ರೂ.5,000/- ಗಳಿಗೆ ಹೆಚ್ಚಿಸಿ 2022-23 ನೇ ಸಾಲಿನಲ್ಲಿ ನೇರ ನಗದು ವರ್ಗಾವಣೆ ಮುಖಾಂತರ ಪಾವತಿಸಲಾಗಿದೆ.<br><br>ವಿದ್ಯುತ್ ಚಾಲಿತ ಘಟಕ (ಮಗ್ಗ)ದಲ್ಲಿ ಕೆಲಸ ಮಾಡುತ್ತಿರುವ ಕೂಲಿ ಕಾರ್ಮಿಕರಿಗೆ ಒಂದು ಬಾರಿಗೆ ಮಾತ್ರ ಅನ್ವಯಿಸುವಂತೆ ರೂ.2,000/- ಗಳ ಪರಿಹಾರ ಧನವನ್ನು ನೇರ ನಗದು ವರ್ಗಾವಣೆ (ಡಿ.ಬಿ.ಟಿ) ಮೂಲಕ ನೀಡಲು ಸರ್ಕಾರದ ಆದೇಶ ಸಂಖ್ಯೆ: CI 49 JAKY 2020 ದಿನಾಂಕ: 26.05.2020 ರಲ್ಲಿ ಮಾನದಂಡಗಳ ಆದೇಶವನ್ನು ಹೊರಡಿಸಲಾಗಿರುತ್ತದೆ ಆದೇಶವನ್ನು ಅನುಬಂಧ-4 ರಲ್ಲಿ ಒದಗಿಸಿದೆ.<br><br>ಕೋವಿಡ್-19 ಎರಡನೇ ಅಲೆಯ ಸಂಷ್ಟಕದ ಪ್ರಯುಕ್ತ ಪವರ್ ಲೂಮ್ ನೇಕಾರರಿಗೆ ತಲಾ ರೂ.3,000/- ಗಳ ಪರಿಹಾರ ಧನವನ್ನು ನೇರ ನಗದು ವರ್ಗಾವಣೆ (ಡಿ.ಬಿ.ಟಿ) ಮೂಲಕ ನೀಡಲು ಸರ್ಕಾರದ ಆದೇಶ ಸಂಖ್ಯೆ: CI/44/JAKY/2021, ದಿನಾಂಕ: 21.06.2021ರಲ್ಲಿ ಮಾನದಂಡಗಳ ಆದೇಶವನ್ನು ಹೊರಡಿಸಲಾಗಿರುತ್ತದೆ ಆದೇಶವನ್ನು ಅನುಬಂಧ-5 ರಲ್ಲಿ ಒದಗಿಸಿದೆ. | Government vide its order No. VaaKai 47 JAKY 2020, dated 16.05.2020 has issued parameters for payment of Rs.2,000/- annually was transferred through Direct Bank Transfer (D.B.T) under Nekar Samman Scheme for the handloom weavers Copy enclosed in Annexure-3<br><br>As per Para No.268 of budget announcement 2022-23 above amount of Rs.2,000/- one time assistance to the Handloom Weavers is enhanced to Rs.5,000/- during the year 2022-23 and the same will be paid through DBT.<br><br>Government vide its order No. VaaKai 49 JAKY 2020, dated 26.05.2020 has issued parameters for onetime payment of Rs.2,000/- annually under Direct Bank Transfer (D.B.T) Copy enclosed in Annexure-4<br><br>Government order No: CI/44/JAKY/2021, dated: 21.06.2021 to provide compensation of Rs.3,000/- each to power loom weavers through Direct Cash Transfer (DBT) due to the second wave of Covid-19. The norms order issued is provided in Copy enclosed in Annexure-5 |

ಸಂಖ್ಯೆ: CI 307 JAKE 2022

(ಶಂಕರ ಬ. ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು
ಅಭಿವೃದ್ಧಿ ಸಚಿವರು

## ಅನುಬಂಧ-1

**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚನ್ನರಾಜ್ ಬಸವರಾಜ್ ಹಟ್ಟಿ ಹೊಳ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1032 ಕ್ಕೆ ಮಾಹಿತಿ**

| ರಾಜ್ಯಾದಾದ್ಯಂತ ನೇಕಾರರ ಜಿಲ್ಲಾವಾರು ಮಾಹಿತಿ | | | |
|---|---|---|---|
| ಕ್ರ.ಸಂ | ಜಿಲ್ಲೆಯ ಹೆಸರು | 4ನೇ ರಾಷ್ಟ್ರೀಯ ಗಣತಿ ಪ್ರಕಾರ ಕೈಮಗ್ಗ ನೇಕಾರರ ಸಂಖ್ಯೆ | ವಿದ್ಯುತ್ ಮಗ್ಗ ಗಣತಿ ಪ್ರಕಾರ ವಿದ್ಯುತ್‌ಮಗ್ಗ ನೇಕಾರರ ಸಂಖ್ಯೆ |
| 1 | ಬಾಗಲಕೋಟೆ | 13207 | 20759 |
| 2 | ಬೆಂಗಳೂರು ನಗರ | 1445 | 18249 |
| 3 | ಬೆಂಗಳೂರು ಗ್ರಾಮಾಂತರ | 179 | 14342 |
| 4 | ಬೆಳಗಾವಿ | 5351 | 20567 |
| 5 | ಬಳ್ಳಾರಿ | 3081 | 0 |
| 6 | ಬೀದರ್ | 1281 | 2 |
| 7 | ಚಾಮರಾಜನಗರ | 2186 | 481 |
| 8 | ಚಿಕ್ಕಬಳ್ಳಾಪುರ | 1260 | 2987 |
| 9 | ಚಿಕ್ಕಮಗಳೂರು | 180 | 2 |
| 10 | ಚಿತ್ರದುರ್ಗ | 5023 | 118 |
| 11 | ದಕ್ಷಿಣ ಕನ್ನಡ | 47 | 0 |
| 12 | ದಾವಣಗೆರೆ | 539 | 67 |
| 13 | ಧಾರವಾಡ | 629 | 396 |
| 14 | ಗದಗ | 2738 | 3901 |
| 15 | ಹಾಸನ | 724 | 727 |
| 16 | ಹಾವೇರಿ | 4653 | 661 |
| 17 | ಕಲಬುರಗಿ | 679 | 25 |
| 18 | ಕೊಡಗು | 49 | 15 |
| 19 | ಕೋಲಾರ | 169 | 505 |
| 20 | ಕೊಪ್ಪಳ | 1792 | 1490 |
| 21 | ಮಂಡ್ಯ | 171 | 640 |
| 22 | ಮೈಸೂರು | 401 | 90 |
| 23 | ರಾಯಚೂರು | 32 | 0 |
| 24 | ರಾಮನಗರ | 107 | 5397 |
| 25 | ಶಿವಮೊಗ್ಗ | 163 | 58 |
| 26 | ತುಮಕೂರು | 6019 | 5583 |
| 27 | ಉಡುಪಿ | 40 | 0 |
| 28 | ಉತ್ತರ ಕನ್ನಡ | 23 | 17 |
| 29 | ವಿಜಯಪುರ | 1126 | 53 |
| 30 | ಯಾದಗಿರಿ | 956 | 0 |
| | ಒಟ್ಟು | 54250 | 97133 |

ಜಂಟಿ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ

# ಅನುಬಂಧ-2

## ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚನ್ನರಾಜ್ ಬಸವರಾಜ್ ಹಟ್ಟಿ ಹೊಳಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1032 ಕ್ಕೆ ಮಾಹಿತಿ

| ಕ್ರ.ಸಂ | ಜಿಲ್ಲೆ | ನೇಕಾರರ ಸಮ್ಮಾನ್ ಯೋಜನೆ | | | | ವಿದ್ಯುತ್ ಮಗ್ಗ ನೇಕಾರರಿಗೆ ಪರಿಹಾರ ಧನ | | | |
|---|---|---|---|---|---|---|---|---|---|
| | | 2020-21 | | 2021-22 | | 2020-21 | | 2021-22 | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಬೆಂಗಳೂರು ನಗರ | 1304 | 26.08 | 1365 | 27.30 | 8304 | 166.08 | 17417 | 522.51 |
| 2 | ಬೆಂಗಳೂರು ಗ್ರಾಮಾಂತರ | 151 | 3.02 | 167 | 3.34 | 5393 | 107.86 | 12347 | 370.41 |
| 3 | ಬಾಗಲಕೋಟೆ | 11262 | 225.24 | 11960 | 239.20 | 12601 | 252.02 | 17524 | 525.72 |
| 4 | ಬೆಳಗಾವಿ | 4862 | 97.24 | 5433 | 108.66 | 15215 | 304.30 | 20650 | 619.50 |
| 5 | ಬಳ್ಳಾರಿ | 1471 | 29.42 | 1473 | 29.46 | 0 | 0 | 0 | 0 |
| 6 | ಬೀದರ್ | 759 | 15.18 | 697 | 13.94 | 0 | 0 | 0 | 0 |
| 7 | ಚಾಮರಾಜನಗರ | 1826 | 36.52 | 1810 | 36.20 | 0 | 0 | 3 | 0.09 |
| 8 | ಚಿಕ್ಕಮಗಳೂರು | 123 | 2.46 | 122 | 2.44 | 0 | 0 | 0 | 0 |
| 9 | ಚಿಕ್ಕಬಳ್ಳಾಪುರ | 1067 | 21.34 | 1060 | 21.20 | 869 | 17.38 | 3022 | 90.66 |
| 10 | ಚಿತ್ರದುರ್ಗ | 4928 | 98.56 | 4902 | 98.04 | 28 | 0.56 | 56 | 1.68 |
| 11 | ದಕ್ಷಿಣ ಕನ್ನಡ | 94 | 1.88 | 95 | 1.90 | 0 | 0 | 0 | 0 |
| 12 | ದಾವಣಗೆರೆ | 480 | 9.6 | 481 | 9.62 | 55 | 1.10 | 61 | 1.83 |
| 13 | ಧಾರವಾಡ | 514 | 10.28 | 503 | 10.06 | 253 | 5.06 | 400 | 12.00 |
| 14 | ಗದಗ | 2363 | 47.26 | 2713 | 54.26 | 2788 | 55.76 | 3285 | 98.55 |
| 15 | ಹಾಸನ | 283 | 5.66 | 289 | 5.78 | 91 | 1.82 | 148 | 4.44 |
| 16 | ಹಾವೇರಿ | 3873 | 77.46 | 3798 | 75.96 | 412 | 8.24 | 718 | 21.54 |
| 17 | ಕಲಬುರಗಿ | 817 | 16.34 | 821 | 16.42 | 55 | 1.10 | 47 | 1.41 |
| 18 | ಕೊಡಗು | 58 | 1.16 | 56 | 1.12 | 0 | 0 | 0 | 0 |
| 19 | ಕೋಲಾರ | 216 | 4.32 | 227 | 4.54 | 176 | 3.52 | 506 | 15.18 |
| 20 | ಕೊಪ್ಪಳ | 1557 | 31.14 | 1371 | 27.42 | 823 | 16.46 | 1282 | 38.46 |
| 21 | ಮಂಡ್ಯ | 170 | 3.4 | 167 | 3.34 | 278 | 5.56 | 359 | 10.77 |
| 22 | ಮೈಸೂರು | 373 | 7.46 | 369 | 7.38 | 94 | 1.88 | 84 | 2.52 |
| 23 | ರಾಯಚೂರು | 41 | 0.82 | 40 | 0.80 | 0 | 0 | 0 | 0 |
| 24 | ರಾಮನಗರ | 113 | 2.26 | 113 | 2.26 | 1106 | 22.12 | 3151 | 94.53 |
| 25 | ಶಿವಮೊಗ್ಗ | 268 | 5.36 | 267 | 5.34 | 0 | 0 | 0 | 0 |
| 26 | ತುಮಕೂರು | 5829 | 116.58 | 6338 | 126.76 | 3104 | 62.08 | 4451 | 133.53 |
| 27 | ಉಡುಪಿ | 61 | 1.22 | 63 | 1.26 | 0 | 0 | 0 | 0 |
| 28 | ಉತ್ತರ ಕನ್ನಡ | 33 | 0.66 | 33 | 0.66 | 12 | 0.24 | 12 | 0.36 |
| 29 | ವಿಜಯಪುರ | 1749 | 34.98 | 2316 | 46.32 | 34 | 0.68 | 28 | 0.84 |
| 30 | ಯಾದಗಿರಿ | 503 | 10.06 | 495 | 9.90 | 0 | 0 | 0 | 0 |
| | ಒಟ್ಟು | 47148 | 942.96 | 49544 | 990.88 | 51691 | 1033.82 | 85551 | 2566.53 |

ಜಂಟಿ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೋವಿಡ್-19 ಪ್ರಯುಕ್ತ ವಿದ್ಯುತ್ ಮಗ್ಗ ನೇಕಾರರಿಗೆ ಆರ್ಥಿಕ ಬೆಂಬಲ ನೀಡುವ ಕುರಿತು.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ವಾಕೈ 47 JAKY 2020, ದಿನಾಂಕ: 15.05.2020.
2. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಕೈಜಇ/ ಜಿ1/ ಕೋವಿಡ್ -19/ ವಿ.ಪ/ 2020-21, ದಿನಾಂಕ:07.05.2020.
3. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಕೈಜಇ/ ಜಿ1/ ಕೋವಿಡ್ -19/ ವಿ.ಮಗ್ಗ.ಪರಿಹಾರ/ 2020-21, ದಿನಾಂಕ:19.05.2020.

***********

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಭಾರತದಾದ್ಯಂತ ಲಾಕ್ ಡೌನ್ ಆಗಿರುವ ಹಿನ್ನೆಲೆಯಲ್ಲಿ, ನೇಕಾರರು ಸಂಕಷ್ಟದಲ್ಲಿರುವುದರಿಂದ, ಕೈಮಗ್ಗ ನೇಕಾರರಿಗೆ ನೇಕಾರರ ಸಮ್ಮಾನ್ ಯೋಜನೆಯನ್ನು ಘೋಷಿಸಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ರವರು ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಭಾರತದಾದ್ಯಂತ ಲಾಕ್ ಡೌನ್ ಪರಿಸ್ಥಿತಿಯಲ್ಲಿ ವಿದ್ಯುತ್ ಮಗ್ಗ ನೇಕಾರರೂ ಸಹ ಸಂಕಷ್ಟದಲ್ಲಿರುವುದರಿಂದ ಈ ಸಮಯದಲ್ಲಿ ರಾಜ್ಯದಲ್ಲಿರುವ ವಿದ್ಯುತ್ ಮಗ್ಗ ನೇಕಾರರಿಗೆ ತಲಾ ರೂ.2000/- (ಎರಡು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಆರ್ಥಿಕ ಬೆಂಬಲವನ್ನು ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ (3)ರ ಪತ್ರದಲ್ಲಿ ಜವಳಿ ಅಭಿವೃದ್ಧಿ ಆಯುಕ್ತರು ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ, ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ವಾಕೈ 49 JAKY 2020 ದಿನಾಂಕ:26.05.2020**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಭಾರತದಾದ್ಯಂತ ಲಾಕ್ ಡೌನ್ ಪರಿಸ್ಥಿತಿಯಲ್ಲಿ ವಿದ್ಯುತ್ ಮಗ್ಗ ನೇಕಾರರೂ ಸಹ ಸಂಕಷ್ಟದಲ್ಲಿರುವುದರಿಂದ ಕರ್ನಾಟಕ ರಾಜ್ಯದಲ್ಲಿರುವ 1.25 ಲಕ್ಷ ವಿದ್ಯುತ್ ಚಾಲಿತ ಘಟಕ(ಮಗ್ಗ)ಗಳಲ್ಲಿ ಪ್ರತಿ ವಿದ್ಯುತ್ ಚಾಲಿತ ಘಟಕ(ಮಗ್ಗ)ಗಳಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಕೂಲಿ ಕಾರ್ಮಿಕರಿಗೆ ಒಂದು ಬಾರಿಗೆ ಮಾತ್ರ

..2

ಅನ್ವಯಿಸುವಂತೆ ರೂ.2000/- (ಎರಡು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಒಟ್ಟು ರೂ.25.00 ಕೋಟಿಗಳನ್ನು ಪರಿಹಾರ ಧನವನ್ನಾಗಿ ಮಂಜೂರು ಮಾಡಿ ಈ ಕೆಳಕಂಡ ಷರತ್ತುಗೊಳಪಟ್ಟು ಆದೇಶಿಸಿದೆ:-

1. ಫಲಾನುಭವಿ ಅರ್ಹತೆ:

- ಫಲಾನುಭವಿಯು ವಿದ್ಯುತ್ ಮಗ್ಗ ಘಟಕದಲ್ಲಿ ಕೂಲಿ ಕಾರ್ಮಿಕನಾಗಿ ಅಥವಾ ಸ್ವತಃ ಕಾರ್ಮಿಕನಾಗಿ ಕೆಲಸ ಮಾಡುತ್ತಿರುವವರು.
- 01 ರಿಂದ 20 ಹೆಚ್.ಪಿ. ವರೆಗೆ ವಿದ್ಯುತ್ ರಿಯಾಯಿತಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ವಿದ್ಯುತ್ ಮಗ್ಗ ಘಟಕಗಳಿಗೆ ಮಾತ್ರ ಅನ್ವಯಿಸುತ್ತದೆ.

2. **ಹಣಕಾಸಿನ ನೆರವು:**

- ಪ್ರತಿ ವಿದ್ಯುತ್ ಚಾಲಿತ ಘಟಕ (ಮಗ್ಗ)ದಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಕೂಲಿ ಕಾರ್ಮಿಕರಿಗೆ ಒಂದು ಬಾರಿಗೆ ಮಾತ್ರ ಅನ್ವಯಿಸುವಂತೆ ರೂ.2000/- ಗಳನ್ನು ನೀಡಲು ಉದ್ದೇಶಿಸಲಾಗಿದೆ.
- ಫಲಾನುಭವಿಗಳ ಆಧಾರ್ ಕಾರ್ಡ್‌ನ ವಿವರಗಳನ್ನು ಪಡೆದುಕೊಂಡು, ಹಣವನ್ನು ಖಜಾನೆ-2ರಲ್ಲಿರುವ ನೇರ ನಗದು ನಿರ್ವಹಣೆ (DBT) ಮುಖಾಂತರ ಪಾವತಿಸತಕ್ಕದ್ದು.
- ಫಲಾನುಭವಿಗಳ ವಿವರಗಳನ್ನು ಸಂಗ್ರಹಿಸಲು ಪ್ರತ್ಯೇಕವಾಗಿ ತಂತ್ರಾಂಶವೇನಾದರೂ ಅಗತ್ಯವಿದ್ದಲ್ಲಿ ಅದನ್ನು ಜವಳಿ ಅಭಿವೃದ್ಧಿ ಆಯುಕ್ತರ ಕಚೇರಿಯಲ್ಲಿಯೇ ಅಥವಾ ಇ-ಆಡಳಿತದ ಮುಖಾಂತರ ಅಭಿವೃದ್ಧಿಪಡಿಸತಕ್ಕದ್ದು.
- ಆರ್ಥಿಕ ಇಲಾಖೆಯು ಸೂಚಿಸಿರುವಂತೆ, ಒಟ್ಟು ಘಟಕಗಳ ಸಂಖ್ಯೆ 1.25 ಲಕ್ಷ ಹಾಗೂ ವಿದ್ಯುತ್ ಚಾಲಿತ ಘಟಕದಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಕೂಲಿ ಕಾರ್ಮಿಕರಿಗೆ ಒಂದು ಬಾರಿ ನೀಡುವ ಪರಿಹಾರ ಧನದ ಆರ್ಥಿಕ ಹೊರೆಯು ರೂ.25.00 ಕೋಟಿ ಮೀರತಕ್ಕದ್ದಲ್ಲ.

3. **ಫಲಾನುಭವಿಗಳು ಸಲ್ಲಿಸಬೇಕಾದ ದಾಖಲೆಗಳು:**

- ಸಾಮಾನ್ಯ ನಮೂನೆಯಲ್ಲಿ ಫಲಾನುಭವಿ(ಕೂಲಿ ಕಾರ್ಮಿಕರ)ಯ ಅರ್ಜಿ(ಆನ್ ಲೈನ್ ಮುಖಾಂತರ).
- ಕೂಲಿ ಕಾರ್ಮಿಕರ ಆಧಾರ್ ಕಾರ್ಡ್ ಪ್ರತಿ.
- ಕೂಲಿ ಕಾರ್ಮಿಕರ ಆಧಾರ್ ಸಂಖ್ಯೆ ಲಿಂಕ್ ಮಾಡಿದ ಬ್ಯಾಂಕ್ ಖಾತೆಯ ಪಾಸ್ ಬುಕ್ ಪ್ರತಿ.
- ಕೂಲಿ ಕಾರ್ಮಿಕರು ವಿದ್ಯುತ್ ಮಗ್ಗ ಘಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ದಾಖಲಾತಿ(ಫೋಟೋ).
- ಘಟಕದ ವಿದ್ಯುತ್ ಸಂಪರ್ಕ ಹೊಂದಿರುವ ಆರ್.ಆರ್.ನಂ & ಕಳೆದ ತಿಂಗಳ ವಿದ್ಯುತ್ ಬಿಲ್.
- ಘಟಕದ ಉದ್ಯೋಗ ಆಧಾರ್ / ಎಂ.ಎಸ್.ಎಂ.ಇ/ [illegible]
- ಘಟಕದಲ್ಲಿ ಕಾರ್ಯನಿರ್ವಹಿಸುವ ಕೂಲಿ ನೇಕಾರರ ವಿವರಗಳನ್ನು ಒಳಗೊಂಡ ಮಜೂರಿ ಪಾವತಿಯ ಪ್ರತಿ (ಲಭ್ಯವಿದ್ದಲ್ಲಿ).
- ಮಾಲೀಕರಿಂದ ಕೂಲಿ ನೇಕಾರರ ಮಾಹಿತಿಯ ಕುರಿತು ರೂ.20/- ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ.

4. ಅನುಷ್ಠಾನ

- ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಉಪ / ಸಹಾಯಕ ನಿರ್ದೇಶಕರುಗಳು ಕೂಲಿ ಕಾರ್ಮಿಕರು ಅರ್ಜಿಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸುವ ಕುರಿತು ಅಗತ್ಯ ಸೇವೆ ಒದಗಿಸುವುದು.

- ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಉಪ / ಸಹಾಯಕ ನಿರ್ದೇಶಕರುಗಳು ಜವಳಿ ಅಭಿವೃದ್ಧಿ ಆಯುಕ್ತರ ಕಛೇರಿಯ ಮಾರ್ಗದರ್ಶನಗಳಡಿಯಲ್ಲಿ ಅನುಷ್ಠಾನಗೊಳಿಸತಕ್ಕದ್ದು.
- ಯೋಜನೆಯನ್ನು ಯಾವ ಫಲಾನುಭವಿಗಳಿಗಾಗಿ ಘೋಷಣೆ ಮಾಡಲಾಗಿದೆಯೋ ಅವರನ್ನು ಮಾತ್ರ ಪರಿಗಣಿಸತಕ್ಕದ್ದು.
- ಫಲಾನುಭವಿಗಳ ಮಾಹಿತಿಯನ್ನು ಸಂಗ್ರಹಿಸಲು ಸೂಕ್ತ ಕ್ರಮಕೈಗೊಳ್ಳತಕ್ಕದ್ದು.
- ಫಲಾನುಭವಿಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸತಕ್ಕದ್ದು.
- ವಿಭಾಗ ಮಟ್ಟದ ಅಧಿಕಾರಿಗಳು ಯೋಜನೆಯ ಅನುಷ್ಠಾನದ ಕುರಿತು ಪರಿಶೀಲನೆ ಮಾಡತಕ್ಕದ್ದು.

ಪ್ರಸ್ತಾವಿತ ಯೋಜನೆಗೆ ತಗಲುವ ವೆಚ್ಚವನ್ನು 2020-21ನೇ ಸಾಲಿನ ನೇಕಾರರ ಪ್ಯಾಕೇಜ್ ಯೋಜನೆಯ ಲೆಕ್ಕಶೀರ್ಷಿಕೆ:2851-00-103-0-62-106 ರಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ನೀಡಿರುವ ಸಹಮತಿ ಸಂಖ್ಯೆ: ಆಇ 130 ವೆಚ್ಚ-1, 2020, ದಿನಾಂಕ: 15.05.2020 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
26/5/2020
(ಬಿ. ವೆಂಕಟೇಶಮೂರ್ತಿ)
ಸರ್ಕಾರದ ಉಪ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಜವಳಿ)

ಇವರಿಗೆ,

ಜಂಟಿ ನಿರ್ದೇಶಕರು, ಕರ್ನಾಟಕ ವಿಶೇಷ ರಾಜ್ಯ ಪತ್ರ, ವಿಕಾಸ ಸೌಧ, ಬೆಂಗಳೂರು ಇವರಿಗೆ- ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಕೂಡಲೇ ಪ್ರಕಟಿಸಿ 100 ಪ್ರತಿಗಳನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಒದಗಿಸುವಂತೆ ಕೋರಿದೆ.

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ)/ (ಇ & ಆರ್.ಎಸ್.ಎ) (ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಶುಭೋದಯ ಕಾಂಪ್ಲೆಕ್ಸ್, ನಂ.86, ರೈಲ್ವೆ ಸಮಾನಾಂತರ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಪ್ರಿಯದರ್ಶಿನಿ, ನೇಕಾರ ಭವನ, ವಿದ್ಯಾನಗರ ಹುಬ್ಬಳ್ಳಿ-580 031.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಮೊದಲನೇ ಮಹಡಿ, ವಸ್ತು ಪ್ರದರ್ಶನ ಕೇಂದ್ರ, ಕಣಬರಗಿ ಕೈಗಾರಿಕಾ ಪ್ರದೇಶ, ಬೆಳಗಾವಿ- 590 015.
5. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಕೆ.ಆರ್.ವೃತ್ತ, ಅಂಬೇಡ್ಕರ್ ರಸ್ತೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-1, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಎಂ.ಎಸ್.ಎಂ.ಇ & ಗಣಿ), ವಿಕಾಸ ಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ಚಟುವಟಿಕೆಗಳನ್ನು ನಡೆಸುವ ನೇಕಾರರಿಗೆ "ನೇಕಾರರ ಸಮ್ಮಾನ್ ಯೋಜನೆ" ಅಡಿ ಆರ್ಥಿಕ ನೆರವು ಪಡೆಯಲು ರೂ.2,000/- ಗಳನ್ನು ವಾರ್ಷಿಕವಾಗಿ ನೇರ ನಗದು ವರ್ಗಾವಣೆ ಮುಖಾಂತರ ನೆರವು ನೀಡುವ ಬಗ್ಗೆ.

ಓದಲಾಗಿದೆ:
1. ಕೋವಿಡ್ -19 ಗೆ ಸಂಬಂಧಿಸಿದಂತೆ, ಮಾನ್ಯ ಮುಖ್ಯಮಂತ್ರಿಗಳ ಪತ್ರಿಕಾಗೋಷ್ಠಿಯ ಘೋಷಣೆ ದಿನಾಂಕ: 06.05.2020.
2. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಕೈಜಇ/ ಕೈಮಗ್ಗ/ ಎ-2/ ನೇಕಾರ ಸಮ್ಮಾನ್/ 2020-21, ದಿನಾಂಕ: 06.05.2020.

**********

<u>ಪ್ರಸ್ತಾವನೆ:</u>

ಕೋವಿಡ್ -19 ರಿಂದ ಉದ್ಭವಿಸಿರುವ ಸಮಸ್ಯೆಗಳಿಂದಾಗಿ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 06.05.2020ರ ಪತ್ರಿಕಾಗೋಷ್ಠಿಯಲ್ಲಿ ರಾಜ್ಯದಲ್ಲಿನ ರೇಷ್ಮೆ, ಹತ್ತಿ, ಹಾಗೂ ಉಣ್ಣೆ ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ಚಟುವಟಿಕೆಗಳನ್ನು ನಡೆಸುವವರು ಕೋವಿಡ್ -19 ಮಹಾಮಾರಿ ರೋಗದಿಂದ ದೇಶದಾದ್ಯಂತ ಲಾಕ್ ಡೌನ್ ಪರಿಣಾಮದಿಂದಾಗಿ ಆರ್ಥಿಕ ಸಂಕಷ್ಟದಲ್ಲಿದ್ದು, ಸರ್ಕಾರವು "ನೇಕಾರರ ಸಮ್ಮಾನ್ ಯೋಜನೆ" ಎಂಬ ಹೊಸ ಯೋಜನೆಯನ್ನು ಪ್ರಕಟಿಸಿ, ಈ ಯೋಜನೆಯಡಿಯಲ್ಲಿ ರಾಜ್ಯದಲ್ಲಿರುವ 54,789 ಕೈಮಗ್ಗ ನೇಕಾರರಿಗೆ ಪ್ರತಿ ವರ್ಷವು ರೂ.2,000/- ಗಳಂತೆ ಅವರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುವುದು ಎಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ(2)ರ ಜವಳಿ ಅಭಿವೃದ್ಧಿ ಆಯುಕ್ತರ ಪತ್ರದಲ್ಲಿ ಕೇಂದ್ರ ಸರ್ಕಾರ ಪ್ರಕಟಿಸಿರುವ ನಾಲ್ಕನೇ ರಾಷ್ಟ್ರೀಯ ಕೈಮಗ್ಗ ಗಣತಿಯ ಪ್ರಕಾರ ರಾಜ್ಯದಲ್ಲಿ ಒಟ್ಟು 33,677 ಕೈಮಗ್ಗ ನೇಕಾರರ ಕುಟುಂಬಗಳಿದ್ದು, 54,789 ಕೈಮಗ್ಗ ನೇಕಾರರು ನೋಂದಣಿಯಾಗಿರುತ್ತಾರೆ ಎಂದು ತಿಳಿಸಿರುತ್ತಾರೆ. ರಾಜ್ಯ ಸರ್ಕಾರ ಘೋಷಣೆ ಮಾಡಿರುವ ನೇಕಾರರ ಸಮ್ಮಾನ್ ಯೋಜನೆಯನ್ನು ಅನುಷ್ಠಾನಗೊಳಿಸಲು ಸದರಿ ಗಣತಿಯಲ್ಲಿ ನೋಂದಾಯಿತ ಪ್ರತಿ ನೇಕಾರರಿಗೆ ರೂ.2,000/- ಗಳಂತೆ ವಾರ್ಷಿಕ ಒಟ್ಟು ರೂ.10.96 ಕೋಟಿಗಳ ಅನುದಾನ ಅವಶ್ಯಕತೆ ಇದ್ದು, ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಸಹಾಯಧನವನ್ನು ನೇರವಾಗಿ ಕೈಮಗ್ಗ ನೇಕಾರರ ಬ್ಯಾಂಕ್ ಖಾತೆಗೆ ಜಮಾ ಮಾಡಲು ಕ್ರಮವಹಿಸಲಾಗುವುದೆಂದು ತಿಳಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ರವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರವು, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ವಾಕೈ 47 JAKY 2020, ದಿನಾಂಕ: 16.05.2020**

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ರಾಜ್ಯದಲ್ಲಿನ ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ಚಟುವಟಿಕೆಗಳನ್ನು ನಡೆಸುವ ನೇಕಾರರಿಗೆ "ನೇಕಾರರ ಸಮ್ಮಾನ್ ಯೋಜನೆ"ಯನ್ನು ಘೋಷಿಸುವ ಮೂಲಕ ರೂ.2,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ ಮುಖಾಂತರ ನೀಡಲು ಈ ಕೆಳಕಂಡ ಷರತ್ತಿಗೊಳಪಟ್ಟು ಆದೇಶಿಸಿದೆ:-

1. ಕೈಮಗ್ಗ ನೇಕಾರರ ಅರ್ಹತೆಗಳು:

- ಕೈಮಗ್ಗ ನೇಕಾರರು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಹತ್ತಿ, ಉಣ್ಣೆ, ರೇಷ್ಮೆ ಮತ್ತು ಇತರೆ ಕೈಮಗ್ಗ ಚಟುವಟಿಕೆಗಳಲ್ಲಿ ತೊಡಗಿರಬೇಕು.
- ನಾಲ್ಕನೇ ರಾಷ್ಟ್ರೀಯ ಕೈಮಗ್ಗ ಗಣತಿಯ ಪಟ್ಟಿಯಲ್ಲಿ ನೊಂದಾಯಿಸಿರಬೇಕು.
- ಕೈಮಗ್ಗ ನೇಕಾರರು ಆಧಾರ ಸಂಖ್ಯೆ ಮತ್ತು ಬ್ಯಾಂಕ್ ಖಾತೆ ಹೊಂದಿರಬೇಕು.
- ವರ್ಷವಾರು ಕೈಮಗ್ಗ ನೇಕಾರರ ಪಟ್ಟಿಯನ್ನು ಪರಿಷ್ಕರಿಸುವ ಅಧಿಕಾರವನ್ನು ಇಲಾಖೆ ಹೊಂದಿರುತ್ತದೆ.

2. ಹಣಕಾಸು ನೆರವು:

- ಕರ್ನಾಟಕ ರಾಜ್ಯದ ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ಚಟುವಟಿಕೆಗಳನ್ನು ನಡೆಸುವ ನೇಕಾರರಿಗೆ ರೂ.2,000/- ವಾರ್ಷಿಕ ಅನುದಾನ ನೀಡಲು ಉದ್ದೇಶಿಸಲಾಗಿದೆ.
- ಈ ಹಣವನ್ನು ನೇಕಾರ ಫಲಾನುಭವಿಯ ನೇರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು.

3. ಅನುಷ್ಠಾನ:

- ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಉಪ/ ಸಹಾಯಕ ನಿರ್ದೇಶಕರುಗಳು ಜವಳಿ ಅಭಿವೃದ್ಧಿ ಆಯುಕ್ತರ ಕಛೇರಿಯ ಮಾರ್ಗದರ್ಶನಗಳಡಿಯಲ್ಲಿ ಅನುಷ್ಠಾನಗೊಳಿಸತಕ್ಕದ್ದು.
- ಈ ಯೋಜನೆಗೆ ಬೇಕಾಗಬಹುದಾದ ತಂತ್ರಾಂಶವನ್ನು ನುರಿತ ಸಂಸ್ಥೆಯನ್ನು ಕೂಡಲೇ ಗುರುತಿಸಿ ಪಡೆಯುವುದು.

4. ಷರತ್ತುಗಳು

- ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಸಲ್ಲಿಸಿರುವಂತೆ ಒಟ್ಟಾರೆ ಫಲಾನುಭವಿಗಳ ಸಂಖ್ಯೆ 54,789 ಯಾವುದೇ ಕಾರಣಕ್ಕೂ ಮೀರತಕ್ಕದ್ದಲ್ಲ. ಪ್ರತಿ ವರ್ಷವೂ ಆರ್ಥಿಕ ಹೊರೆಯು ರೂ.10.96 ಕೋಟಿ ಮೀರತಕ್ಕದ್ದಲ್ಲ. ಇದನ್ನು ಜವಳಿ ಅಭಿವೃದ್ಧಿ ಆಯುಕ್ತರು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.

..3

- ಪ್ರಸ್ತುತ ಸಕ್ರಿಯವಾಗಿ ನೇಕಾರಿಕೆ ವೃತ್ತಿಯಲ್ಲಿ ತೊಡಗಿರುವವರಿಗೆ ಮಾತ್ರ ಈ ಯೋಜನೆಯ ಲಾಭವನ್ನು ತಲುಪಿಸತಕ್ಕದ್ದು. ಇದನ್ನು ಜವಳಿ ಅಭಿವೃದ್ಧಿ ಆಯುಕ್ತರು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.
- ಫಲಾನುಭವಿಗಳ ಆಧಾರ್ ಕಾರ್ಡ್ ನ ವಿವರಗಳನ್ನು ಪಡೆದುಕೊಂಡು, ಹಣವನ್ನು ಖಜಾನೆ-2 ರಲ್ಲಿರುವ ನೇರ ನಗದು ನಿರ್ವಹಣೆ (DBT) ಮುಖಾಂತರ ಪಾವತಿಸತಕ್ಕದ್ದು.
- ಫಲಾನುಭವಿಗಳ ವಿವರಗಳನ್ನು ಸಂಗ್ರಹಿಸಲು ಪ್ರತ್ಯೇಕವಾಗಿ ತಂತ್ರಾಂಶವೇನಾದರೂ ಅಗತ್ಯವಿದ್ದಲ್ಲಿ ಅದನ್ನು ಜವಳಿ ಅಭಿವೃದ್ಧಿ ಆಯುಕ್ತರ ಕಛೇರಿಯಲ್ಲಿಯೇ ಅಥವಾ ಇ-ಆಡಳಿತದ ಮುಖಾಂತರ ಅಭಿವೃದ್ಧಿಪಡಿಸತಕ್ಕದ್ದು.
- ಜವಳಿ ಅಭಿವೃದ್ಧಿ ಆಯುಕ್ತರು ಪ್ರತಿ ವರ್ಷವೂ ಆಯವ್ಯಯ ತಯಾರಿ ಪೂರ್ವದಲ್ಲಿ ಈ ಯೋಜನೆಗೆ ಸಂಬಂಧಿಸಿದಂತೆ, ಅಗತ್ಯವಿರುವಷ್ಟು ಆಯವ್ಯಯ ಹಂಚಿಕೆ ಕುರಿತಂತೆ ಪ್ರಸ್ತಾವನೆಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ/ ಆರ್ಥಿಕ ಇಲಾಖೆಗೆ ಸಲ್ಲಿಸತಕ್ಕದ್ದು.
- ಪ್ರಸ್ತಾವಿತ ನೇಕಾರರ ಸಮ್ಮಾನ್ ಯೋಜನೆಗೆ ತಗಲುವ ವೆಚ್ಚವನ್ನು 2020-21ನೇ ಸಾಲಿನ ನೇಕಾರರ ಪ್ಯಾಕೇಜ್ ಯೋಜನೆಯ ಲೆಕ್ಕ ಶೀರ್ಷಿಕೆ:2851-00-103-0-62-106 ರಡಿಯಲ್ಲಿ ಒದಗಿಸಲಾದ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ನೀಡಿರುವ ಸಹಮತಿ ಸಂಖ್ಯೆ: ಆಇ 127 ವೆಚ್ಚ-1/2020, ದಿನಾಂಕ:15.05.2020 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
15/5/2020
(ಬಿ. ವೆಂಕಟೇಶಮೂರ್ತಿ)
ಸರ್ಕಾರದ ಉಪ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಜವಳಿ)

ಇವರಿಗೆ,

ಜಂಟಿ ನಿರ್ದೇಶಕರು, ಕರ್ನಾಟಕ ವಿಶೇಷ ರಾಜ್ಯ ಪತ್ರ, ವಿಕಾಸ ಸೌಧ, ಬೆಂಗಳೂರು ಇವರಿಗೆ- ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಕೂಡಲೇ ಪ್ರಕಟಿಸಿ 100 ಪ್ರತಿಗಳನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಒದಗಿಸುವಂತ ಕೋರಿದೆ.

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ)/ (ಇ & ಆರ್.ಎಸ್.ಎ) (ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.

6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಎಂ.ಎಸ್.ಎಂ.ಇ & ಗಣಿ), ವಿಕಾಸ ಸೌಧ, ಬೆಂಗಳೂರು.
10. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಶುಭೋದಯ ಕಾಂಪ್ಲೆಕ್ಸ್, ನಂ.86, ರೈಲ್ವೆ ಸಮಾನಾಂತರ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-1, ವಿಧಾನ ಸೌಧ, ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಪ್ರಿಯದರ್ಶಿನಿ, ನೇಕಾರ ಭವನ, ವಿದ್ಯಾನಗರ ಹುಬ್ಬಳ್ಳಿ-580 031.
13. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಮೊದಲನೇ ಮಹಡಿ, ವಸ್ತು ಪ್ರದರ್ಶನ ಕೇಂದ್ರ, ಕಣಬುರಗಿ ಕೈಗಾರಿಕಾ ಪ್ರದೇಶ, ಬೆಳಗಾವಿ- 590 015.
14. ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನ ಇಲಾಖೆ, ನಂ.17, [illegible], ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು.
15. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
16. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಕೆ.ಆರ್.ವೃತ್ತ, ಅಂಬೇಡ್ಕರ್ ರಸ್ತೆ, ಬೆಂಗಳೂರು.
17. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಕೋವಿಡ್-19 ಎರಡನೇ ಅಲೆಯ ಸಂಕಷ್ಟದ ಪ್ರಯುಕ್ತ ಪವರ್ ಲೂಮ್ ನೇಕಾರರಿಗೆ ಆರ್ಥಿಕ ಬೆಂಬಲ ನೀಡುವ ಕುರಿತು.

ಓದಲಾಗಿದೆ:
1. ಕೋವಿಡ್-19 ಎರಡನೇ ಅಲೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳ ಆರ್ಥಿಕ ಪರಿಹಾರ ಘೋಷಣೆ ದಿನಾಂಕ: 03.06.2021.
2. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಕೈಜಇ/ ಜವಳಿ/ ಟಿ-1/ ಕೋವಿಡ್-2ನೇಅಲೆ/ ವಿ.ಮಗ್ಗ/ ಪರಿಹಾರ /2021-22, ದಿನಾಂಕ: 05.06.2021

* * *

ಪ್ರಸ್ತಾವನೆ:-

ಮೇಲೆ ಓದಲಾದ(1)ರಲ್ಲಿ ಕೋವಿಡ್-19 ಎರಡನೇ ಅಲೆಯಿಂದ ಲಾಕ್ ಡೌನ್ ಘೋಷಣೆ ಮಾಡಿದ್ದು, ಇದರಿಂದ ಬಾಧಿತವಾದ ಪವರ್ ಲೂಮ್ ನೇಕಾರರಿಗೆ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:03.06.2021 ರಂದು ಪತ್ರಿಕಾಗೋಷ್ಠಿಯಲ್ಲಿ ಪ್ರತಿ ಪವರ್ ಲೂಮ್ ಗೆ ಇಬ್ಬರು ಕೆಲಸಗಾರರಿಗೆ ಮೀರದಂತೆ ತಲಾ ರೂ.3,000/-ದಂತೆ ಪರಿಹಾರ ನೀಡಲು ನಿರ್ಧರಿಸಿದೆ. ಇದರಿಂದ ಸುಮಾರು 59 ಸಾವಿರ ಪವರ್ ಲೂಮ್ ಗಳಿಗೆ ರೂ.35.00 ಕೋಟಿ ವೆಚ್ಚವಾಗಲಿದೆ ಎಂದು ಘೋಷಿಸಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ, ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆಯವರು ಕೋವಿಡ್-19 ಸಾಂಕ್ರಾಮಿಕ ರೋಗದ ಎರಡನೇ ಅಲೆಯ ಹರಡುವಿಕೆಯನ್ನು ತಡೆಗಟ್ಟಲು ಸರ್ಕಾರವು ವಿವಿಧ ಚಟುವಟಿಕೆಗಳು/ ಕೈಗಾರಿಕೆಗಳ ಮೇಲೆ ನಿರ್ಬಂಧ ವಿಧಿಸಿದ್ದು, ಇದರಿಂದ ಪವರ್ ಲೂಮ್ ಹಾಗೂ ಪೂರಕ ಚಟುವಟಿಕೆಗಳಲ್ಲಿ ತೊಡಗಿರುವ ನೇಕಾರರು/ ಕೆಲಸಗಾರರೂ ಸಹ ಸಂಕಷ್ಟದಲ್ಲಿರುವುದರಿಂದ ಸದರಿ ನೇಕಾರರಿಗೆ ಹಾಗೂ ಕೆಲಸಗಾರರಿಗೆ ತಲಾ ರೂ.3,000/-ಗಳ ಮಾನ್ಯ ಮುಖ್ಯಮಂತ್ರಿಗಳ ಘೋಷಣೆ ಯನ್ವಯ ಆರ್ಥಿಕ ನೆರವನ್ನು ನೀಡಲು ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 44 JAKY 2021, ಬೆಂಗಳೂರು, ದಿನಾಂಕ:21.06.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪವರ್ ಲೂಮ್ ಘಟಕಗಳಲ್ಲಿನ ನೇಕಾರರು ಹಾಗೂ ಪ್ರಿ-ಲೂಮ್ ಚಟುವಟಿಕೆಗಳಾದ ಟ್ವಿಸ್ಟಿಂಗ್, ವೈಂಡಿಂಗ್, ಯಾರ್ನ್ ಡೈಯಿಂಗ್, ವಾರ್ಪಿಂಗ್, ಪಿರ್ನ್ ವೈಂಡಿಂಗ್ ಅಂಡ್ ವಾರ್ಪಿಂಗ್, ವಾರ್ಪ್ ನಾಟಿಂಗ್ ಹಾಗೂ ಸೈಜಿಂಗ್ ಕೆಲಸಗಾರರಿಗೆ ತಲಾ ರೂ.3,000/-ಗಳಂತೆ ಪರಿಹಾರಧನ ನೀಡಲು 2021-22ನೇ ಸಾಲಿನ ನೇಕಾರರ ಪ್ಯಾಕೇಜ್ ಯೋಜನೆ ಲೆಕ್ಕಶೀರ್ಷಿಕೆ:2851-00-103-0-62-106(ಸಹಾಯಧನ) ರಡಿ ಭರಿಸಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಸರ್ಕಾರದ ಅನುಮೋದನೆ ನೀಡಿದೆ.

1. ಯೋಜನೆಯ ಪ್ರಯೋಜನವನ್ನು ಪ್ರತಿ ಪವರ್ ಲೂಮ್ ನಲ್ಲಿ ಇಬ್ಬರು ವ್ಯಕ್ತಿಗಳಿಗೆ ಮಾತ್ರ ಸೀಮಿತಗೊಳಿಸುವುದು.

2. ಒಂದು ಯೂನಿಟ್(ಘಟಕ) ನಲ್ಲಿ 10 ಲೂಮ್ ಗಳಿಗಿಂತ ಅಧಿಕವಾಗಬಾರದು ಮತ್ತು ಒಟ್ಟು ಫಲಾನುಭವಿಗಳ ಸಂಖ್ಯೆಯು 1.25 ಲಕ್ಷವನ್ನು ಮೀರಬಾರದು

a) <u>ಫಲಾನುಭವಿ ಅರ್ಹತೆ:</u>

- ಫಲಾನುಭವಿಯು ವಿದ್ಯುತ್ ಮಗ್ಗ ವಲಯದಲ್ಲಿ ನೇಕಾರನಾಗಿ ಅಥವಾ ಸ್ವತಃ ನೇಯ್ಗೆ ಕಾರ್ಮಿಕನಾಗಿ ಅಥವಾ ಪೂರಕ ಚಟುವಟಿಕೆಗಳಾದ ಟ್ವಿಸ್ಟಿಂಗ್, ವೈಂಡಿಂಗ್, ಯಾರ್ನ್ ಡೈಯಿಂಗ್, ವಾರ್ಪಿಂಗ್, ಡ್ರಂ ವೈಂಡಿಂಗ್ & ವಾರ್ಪಿಂಗ್, ವಾರ್ಪ್ ನಾಟಿಂಗ್, ಸೈಜಿಂಗ್ ಕಾರ್ಯದಲ್ಲಿನ ನೇಕಾರ/ ಕೆಲಸಗಾರನಾಗಿರಬೇಕು.

b) <u>ಹಣಕಾಸಿನ ನೆರವು:</u>

- ಅರ್ಹ ಪ್ರತಿ ಫಲಾನುಭವಿಗಳಿಗೆ ರೂ.3000/-ಗಳ ಆರ್ಥಿಕ ನೆರವನ್ನು ನೀಡಲು ಉದ್ದೇಶಿಸಲಾಗಿದೆ.
- ಫಲಾನುಭವಿಗಳ ಆಧಾರ್ ಕಾರ್ಡ್‌ನ ವಿವರಗಳನ್ನು ಪಡೆದುಕೊಂಡು, ಹಣವನ್ನು ಖಜಾನೆ-2 ರಲ್ಲಿರುವ ನೇರ ನಗದು ವರ್ಗಾವಣೆ (DBT) ಮುಖಾಂತರ ಪಾವತಿಸತಕ್ಕದ್ದು.
- ಫಲಾನುಭವಿಗಳ ವಿವರಗಳನ್ನು ಸಂಗ್ರಹಿಸಲು ಪ್ರತ್ಯೇಕವಾಗಿ ತಂತ್ರಾಂಶವೇನಾದರೂ ಅಗತ್ಯವಿದ್ದಲ್ಲಿ ಅದನ್ನು ಜವಳಿ ಅಭಿವೃದ್ಧಿ ಆಯುಕ್ತರ ಕಚೇರಿಯಲ್ಲಿಯೇ ಅಥವಾ ಇ-ಆಡಳಿತದ ಮುಖಾಂತರ ಅಭಿವೃದ್ಧಿಪಡಿಸತಕ್ಕದ್ದು.

c) <u>ಸಲ್ಲಿಸಬೇಕಾದ ಅವಶ್ಯ ದಾಖಲಾತಿಗಳು:</u>

- ಸಾಮಾನ್ಯ ನಮೂನೆಯಲ್ಲಿ ಫಲಾನುಭವಿಯು (ನೇಕಾರ ಕೆಲಸಗಾರ) ಅರ್ಜಿ (ಆನ್ ಲೈನ್ ಮುಖಾಂತರ).
- ಆಧಾರ್ ಕಾರ್ಡ್ ಮತ್ತು ಸಮ್ಮತಿ (Consent Letter) ಪತ್ರ.
- ವಿದ್ಯುತ್ ಮಗ್ಗ ಘಟಕ / ಪೂರಕ ಚಟುವಟಿಕೆಯಲ್ಲಿನ ಆರ್.ಆರ್.ಸಂಖ್ಯೆ / ಬಿಲ್ ಪ್ರತಿ.
- ಘಟಕದ ಉದ್ಯೋಗ್ ಆಧಾರ್ / ಡಿ.ಎಂ.ಸಿ/ ಉದ್ದಿಮೆದಾರರ ಪರವಾನಗಿ ಪತ್ರ (ಇದ್ದಲ್ಲಿ ಸಲ್ಲಿಸುವುದು).
- ಆಧಾರ್ ಸಂಖ್ಯೆ ಲಿಂಕ್ ಮಾಡಿದ ಬ್ಯಾಂಕ್ ಖಾತೆ ಸಂಖ್ಯೆ / ವಿವರ.
- ಘಟಕದ ಮಾಲೀಕರಿಂದ ನೇಕಾರ / ಕೆಲಸಗಾರರ ವಿವರಗಳನ್ನು ಲೆಟರ್ ಹೆಡ್ / ಬಾಂಡ್ ಪೇಪರ್ / ಸಾಮಾನ್ಯ ಕಾಗದದಲ್ಲಿ ದೃಢೀಕರಣ ಪತ್ರ ಒದಗಿಸುವುದು.

3. <u>ಅನುಷ್ಠಾನ:</u>

- ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಉಪ/ ಸಹಾಯಕ ನಿರ್ದೇಶಕರು ಅನುಷ್ಠಾನಗೊಳಿಸತಕ್ಕದ್ದು.
- ಯೋಜನೆಯನ್ನು ಯಾವ ಫಲಾನುಭವಿಗಳಿಗಾಗಿ ಘೋಷಣೆ ಮಾಡಲಾಗಿದೆಯೋ ಅವರನ್ನು ಮಾತ್ರ ಪರಿಗಣಿಸತಕ್ಕದ್ದು.
- ಫಲಾನುಭವಿಗಳ ಮಾಹಿತಿಯನ್ನು ಸಂಗ್ರಹಿಸಲು ಸೂಕ್ತ ಕ್ರಮಕೈಗೊಳ್ಳತಕ್ಕದ್ದು.

- ಫಲಾನುಭವಿಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸತಕ್ಕದ್ದು.
- ಪವರ್ ಲೂಮ್ ಕೆಲಸಗಾರರ ಅರ್ಜಿಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸುವ ಕುರಿತು ಅಗತ್ಯ ಸೇವೆ ಒದಗಿಸುವುದು.
- ವಿಭಾಗ ಮಟ್ಟದ ಅಧಿಕಾರಿಗಳು ಯೋಜನೆಯ ಅನುಷ್ಠಾನದ ಕುರಿತು ಪರಿವೀಕ್ಷಣೆ ಮಾಡತಕ್ಕದ್ದು.
- ಘಟಕಗಳ ಅರ್ಹತೆ ಮತ್ತು ನೈಜತೆಗೆ ಒಳಪಟ್ಟು ಯೋಜನೆಯನ್ನು ಮಾರ್ಗಸೂಚಿಯನುಸಾರ ಫಲಾನುಭವಿಗಳನ್ನು ಗುರುತಿಸುವ ಅಧಿಕಾರವನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯು ಹೊಂದಿರುತ್ತದೆ.

ಸದರಿ ಅನುದಾನವನ್ನು ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆರವರ ಮೇಲು ರುಜುವಿನೊಂದಿಗೆ ಖಜಾನೆಯಿಂದ [illegible] / [illegible] ಮೂಲಕ ಹಣ ಪಡೆಯಲು ಲೆಕ್ಕಾಧಿಕಾರಿ, ಕೈಮಗ್ಗ ಮತ್ತು ಜವಳಿ ಇಲಾಖೆಯವರಿಗೆ ಅಧಿಕಾರ ನೀಡಲಾಗಿದೆ.

ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆಗೊಳಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು, ವೆಚ್ಚಗಳು ಪುನರಾವರ್ತಿತವಾಗದಂತೆ ಎಚ್ಚರವಹಿಸತಕ್ಕದ್ದು.

ಹಣ ಬಳಕೆ ಮಾಡಿದ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 224 ವೆಚ್ಚ-1 2021, ದಿನಾಂಕ: 18.06.2021 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

21/6/21.

(ಬಿ. ವೆಂಕಟೇಶಮೂರ್ತಿ)
ಸರ್ಕಾರದ ಉಪಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಜವಳಿ)

ಗೆ,

1. ಮಹಾಲೇಖಪಾಲರು (ಲೆಕ್ಕಪತ್ರ/ ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಶುಭೋದಯ ಕಾಂಪ್ಲೆಕ್ಸ್, ನಂ.86, ರೈಲ್ವೆ ಸಮಾನಾಂತರ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.
3. ನಿರ್ದೇಶಕರು/ ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಕೆ.ಆರ್.ವೃತ್ತ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಮೊದಲನೇ ಮಹಡಿ, ವಸ್ತು ಪ್ರದರ್ಶನ ಕೇಂದ್ರ, ಕಣಬುರಗಿ ಕೈಗಾರಿಕಾ ಪ್ರದೇಶ, ಬೆಳಗಾವಿ-590 015
5. ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.